ಆ)

	ಅಕ್ಕಿ	ಗೋಧಿ	ಸಕ್ಕರೆ	ಪಾ.ಎಣ್ಣೆ	ಡೀಸೆಲ್
ಡಿಸೆಂಬರ್ -90	45000	30000	17780	-	87564
ಜನವರಿ -90	45000	40000	17780	-	92347
ಫೆಬ್ರುವರಿ -90	48000	45000	17780	1600	-

ಇ) ಸರಾಸರಿ 25,000 ಟನ್ ಅಕ್ಕಿ 5000 ಟನ್ ಗೋಧಿ 8,500 ಟನ್ ಸಕ್ಕರೆ, 9,500 ಟನ್ ಪಾಮೋಲಿನ್ ಎಣ್ಣೆ ಕಡಿಮೆಯಾಗಿದೆ.

ಈ) ಹೌದು

ಉ) ಕೇಂದ್ರದವರು ಅಕ್ಕಿ ಮತ್ತು ಗೋಧಿಯನ್ನು ಹೆಚ್ಚಿಸಿ ಸಕ್ಕರೆ ಮತ್ತು ಪಾಮೋಲಿನ್ ಎಣ್ಣೆಯನ್ನು ಹೆಚ್ಚಿಸಿರುವುದಿಲ್ಲ.

ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳು ಕರ್ನಾಟಕದಿಂದ ಕಬ್ಬನ್ನು ತೆಗೆದುಕೊಳ್ಳಲು ಸರಕಾರದ ಅನುಮತಿ

186 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *(ಮಹಾರಾಷ್ಟ್ರ) ಮಹಾರಾಷ್ಟ್ರದಲ್ಲಿಯ ಸಹಕಾರಿ ಸಕ್ಕರೆ ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯಲ್ಲಿಯ ಸಕ್ಕರೆ ಕಾರ್ಖಾನೆಗಳು ನುರಿಸದೇ ಉಳಿದ ಹೆಚ್ಚುವರಿ ಕಬ್ಬನ್ನು ತಮ್ಮ ಕಾರ್ಖಾನೆಗಳಿಗೆ ಒಯ್ಯಲು ತಯಾರಿರುವುದು ನಿಜವೇ? ಹಾಗಿದ್ದಲ್ಲಿ ಕರ್ನಾಟಕ ಸರ್ಕಾರ ಇದಕ್ಕೆ ಅನುಮತಿ ನೀಡುವುದೇ?*

ಆ) *ಹಾಗಿದ್ದಲ್ಲಿ, ಕರ್ನಾಟಕ ಸರ್ಕಾರ ಈ ಬಗ್ಗೆ ಮುಕ್ತ ಅನುಮತಿಯೊಂದಿಗೆ ರಿಯಾಯತಿ ದರದಲ್ಲಿ ಡೀಸೆಲ್ ಕೊಡುವುದಕ್ಕೆ ಅವಕಾಶ ಮಾಡಿಕೊಡುವುದೇ?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

ಅ) ಹೌದು

ಆ) ಇಲ್ಲ

ಸಹಕಾರಿ ರಂಗಕ್ಕೆ ಚುನಾವಣೆ ನಡೆಸುವ ಬಗ್ಗೆ

187 - ಶ್ರೀ ಉಮೇಶಕತ್ತಿ (ಹುಕ್ಕೇರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಹಕಾರಿ ರಂಗಕ್ಕೆ ಏಪ್ರಿಲ್ ತಿಂಗಳ ಪ್ರಾರಂಭದೊಳಗೆ ಚುನಾವಣೆಯನ್ನು ನಡೆಸಲಾಗುವುದೇ?*

ಆ) *ಚುನಾವಣೆ ನಡೆಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು?*

ಶ್ರೀ ಕೆ.ಹೆಚ್ ಪಾಟೀಲ್ (ಸಹಕಾರ ಸಚಿವರು) :

ಅ) ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ನಡೆಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯಬೆಲೆಯ ಅಂಗಡಿಗಳ ಸಂಖ್ಯೆ

423 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

i) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?*